ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ಪಾಲಿಕೆಯ ಮುಖ್ಯ ಕಛೇರಿಗಳು,ನರಸಿಂಹರಾಜ ಚೌಕ, ಬೆಂಗಳೂರು-560 002.

ಸಂಖ್ಯೆ:ಆ/ಪಿ.ಆರ್/ಕೆ11 /2017-18 ದಿನಾಂಕ: 08-05-2017

ಕಛೇರಿ ಆದೇಶ

ವಿಷಯ:- ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ವಿವಿಧ ಲೆಕ್ಕ ಶೀರ್ಷಿಕೆ ಅಡಿಗಳಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಮೆ.ಕೆಆರ್ಐಡಿಎಲ್ ಸಂಸ್ಥೆ ಮುಖಾಂತರ ಅನುಷ್ಠಾನಗೊಳಿಸುವ ಬಗ್ಗೆ.

****

ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಾರ್ಡ್‌ಗಳಿಗೆ ಈ ಕೆಳಕಂಡಂತೆ ಕುಡಿಯುವ ನೀರಿನ ವ್ಯವಸ್ಥೆಗಾಗಿ ಅನುದಾನ ನೀಡಲಾಗಿರುತ್ತದೆ.

1. 2015-16 ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಖ-1802 ರಲ್ಲಿ ಪ್ರತಿ ಹಳೆ ವಾರ್ಡ್ ಗೆ ರೂ.15.00 ಲಕ್ಷಗಳ ಮತ್ತು ಹೊಸ ವಾರ್ಡ್‌ಗೆ ರೂ.40.00 ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ.
2. 2016-17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಖ-1802 ರಲ್ಲಿ ಪ್ರತಿ ಹಳೆ ವಾರ್ಡ್ ಗೆ ರೂ.15.00 ಲಕ್ಷಗಳ ಮತ್ತು ಹೊಸ ವಾರ್ಡ್‌ಗೆ ರೂ.40.00 ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ.
3. 2015-16 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ 14 ನೇ ಹಣಕಾಸು ಆಯೋಗದಲ್ಲಿ ರೂ.2800.00 ಲಕ್ಷಗಳು ಅನುವು ಮಾಡಿಕ್ಕಿ ಕ್ರಿಯಾ ಯೋಜನೆಯು ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.
4. 2016-17 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ 14 ನೇ ಹಣಕಾಸು ಆಯೋಗದಲ್ಲಿ ರೂ.3400.00 ಲಕ್ಷಗಳು ಅನುವು ಮಾಡಿಕ್ಕಿ ಕ್ರಿಯಾ ಯೋಜನೆಯು ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.

ಈ ಅಂಶಕ್ಕೆ ಸಂಬಂಧಿಸಿದ ಅಧಿಕಾರಿಗಳು ಬಹುತೇಕ ಕಾಮಗಾರಿಗಳಿಗೆ ಈಗಾಗಲೇ ಜಾಬ್ ಕೋಡ್ ಪಡೆದು ಅಂದಾಜುಪಟ್ಟಿಗಳನ್ನು ತಯಾರಿಸಿದ್ದು, ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದ ನಂತರ ಕಾರ್ಯಾದೇಶಗಳನ್ನು ನೀಡಿ ಕಾಮಗಾರಿಗಳನ್ನು ಪ್ರಾರಂಭಿಸಿರುತ್ತಾರೆ ಹಾಗೂ ಭಾಗಶಃ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಈ ಹಿನ್ನಲೆಯಲ್ಲಿ ಪ್ರತಿ ವಾರ್ಡ್‌ನಲ್ಲಿ ನೀರಿನ ಅಭಾವವನ್ನು ಕಡಿಮೆ ಮಾಡಲು ನಿಯಮಗಳಂತೆ ಅಗತ್ಯ ಕ್ರಮಗಳನ್ನು ಕೈಗೊಂಡಿದ್ದರೂ ಸಹ ಪಾಲಿ ಸ್ಥಿತಿಯಲ್ಲಿ ಬಹುತೇಕ ಪಾಲಿಕೆ ಸದಸ್ಯರು ದಿನಾಂಕ:26-04-2017 ರಂದು ನಡೆದ ಕೌನ್ಸಿಲ್ ಸಭೆಯಲ್ಲಿ ಪ್ರಸ್ತುತ ಬೇಸಿಗೆ ಬರಗಾಲದಿಂದ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೇ ಸಾರ್ವಜನಿಕರು ಪರದಾಡುವಂತಾಗಿದೆ ಎಂದು ತಿಳಿಸಿದ್ದು, ಅಗತ್ಯ ಕ್ರಮಗಳನ್ನು ವಿಳಂಭವಾಗದೇ ತುರ್ತಾಗಿ ಕೈಗೊಂಡು ನೀರಿನ ಅಭಾವವನ್ನು ಕಡಿಮೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ದಿನಾಂಕ:26-04-2017 ರಂದು ನಡೆದ ವಿಶೇಷ ಪಾಲಿಕೆ ಸಭೆಯಲ್ಲಿ ಪೂರ್ವ ವಿಭಾಗದ ಸದಸ್ಯರು ಕುಡಿಯುವ ನೀರಿನ ಅಭಾವವನ್ನು ಕಡಿಮೆ ಮಾಡಲು ನಗರ ಪಾಲಿಕೆಯ ಹೊರ ವಲಯಗಳ ವ್ಯಾಪ್ತಿಯಲ್ಲಿ ಬರುವ 110 ಹಳ್ಳಿಗಳಲ್ಲಿ ಪ್ರತಿ ಹಳ್ಳಿಗೆ ಹೊಸದಾಗಿ ಒಂದು ಕೊಳವೆ ಬಾವಿಯನ್ನು ಕೊರೆಯಲು ಹಾಗೂ ಈ ಹಿನ್ನಲೆಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಈಗಾಗಲೇ ಜಾಬ್ ಕೋಡ್ ನೀಡಿರುವ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವುದು, ಕುಡಿಯುವ ನೀರಿನ ಪೈಪ್‌ಗಳ ಅಳವಡಿಕೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಲಾಗಿರುತ್ತದೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಇರುವ ಎಲ್ಲಾ 198 ವಾರ್ಡ್‌ಗಳಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕಾಮಗಾರಿಗಳನ್ನು ತುರ್ತಾಗಿ ಆದ್ಯತೆಯ ಮೇರೆಗೆ ಕೈಗೊಂಡು, ಬಿಲ್ಲುಗಳನ್ನು ಕೂಡಲೇ ಪಾವತಿಸಲು ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿರುವ ಬಿಲ್ಲುಗಳನ್ನು ಡಿ.ಸಿ ಬಿಲ್ಲುಗಳ ಮುಖಾಂತರ ಪಾವತಿಸಲು ಪಾಲಿಕೆಯ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. ಮುಂದುವರೆದಂತೆ, ಪಾಲಿಕೆಯ ಮುಖ್ಯ ಅಭಿಯಂತರರು/ಕಾರ್ಯನಿರ್ವಾಹಕ ಅಭಿಯಂತರರು ಅಧಿಕಾರ ಪ್ರತ್ಯಾಯೋಜನೆಯಂತೆ 2016-17ನೇ ಸಾಲಿನ ನೀರು ಸರಬರಾಜು ಕಾಮಗಾರಿಗಳನ್ನು ಕೂಡಲೇ ನಿರ್ವಹಿಸಲು ಮತ್ತು 2017-18 ರಲ್ಲಿ ಉದ್ದೇಶಿಸಿರುವ ನೀರು ಸರಬರಾಜು ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಿಕೆ, ಟೆಲರ್‌ಗಳನ್ನು ಪ್ರಾರಂಭಿಸಲು ಕೂಡಲೇ ಅಗತ್ಯ ಕ್ರಮಗಳನ್ನು ಕೈಗೊಂಡು ಮೆ. ಕೆಆರ್‌ಐಡಿಎಲ್ ಸಂಸ್ಥೆ ಮುಖಾಂತರ ನಿಯಮಗಳಂತೆ ಕೈಗೊಂಡು ತುರ್ತಾಗಿ ಅನುಷ್ಠಾನಗೊಳಿಸಲು ಆದೇಶಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಯುಕ್ತರು (ಯೋಜನೆ) ರವರಿಗೆ ಮಾಹಿತಿಗಾಗಿ.
2. ಪ್ರಧಾನ ಪ್ರಭಿಯೆಂತರರು ರವರಿಗೆ ಮಾಹಿತಿಗಾಗಿ.
3. ವಲಯೇತರ ಅಪರ/ಜಂಟಿ ಆಯುಕ್ತರು ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಸೂಕ್ತ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಸೂಚಿಸಿದೆ.
4. ವಲಯದ ಮುಖ್ಯ ಅಧಿಕಾರಿಗಳಿಗೆ ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಸೂಕ್ತ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಸೂಚಿಸಿದೆ.
5. ಮುಖ್ಯ ಲೆಕ್ಕಾಧಿಕಾರಿ ರವರಿಗೆ ಮಾಹಿತಿಗಾಗಿ ಮತ್ತು ನೀರು ಸರಬರಾಜು ಕಾಮಗಾರಿಗಳಿಗೆ ಸಂಬಂಧಿಸಿದ ಬಿಲ್ಲುಗಳನ್ನು ಕೂಡಲೇ ಪಾವತಿಸಲು ಸೂಚಿಸಿದೆ.
6. ಮುಖ್ಯ ಆರ್ಥಿಕ ಅಧಿಕಾರಿರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಸೂಕ್ತ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಸೂಚಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
B.B.M.P

ವಿ. ವಿ. ಪಾರ್ಥಿಬರಾಜನ್ (ವಿವಿಪಿ)
- ಬಿಬಿಎಂಪಿ ಸದಸ್ಯರು, ಕುವೆಂಪುನಗರ, ವಾರ್ಡ್ ನಂ. 11 -

V. V. Parthibarajan (VVP)
Corporator, Kuvempunagara, Ward No.-11

ರವರಿಗೆ,

ಪೂಜ್ಯ ಮಹಾಪೌರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಎನ್.ಆರ್ ವೃತ್ತ,
ಬೆಂಗಳೂರು – 02.

ಮಾನ್ಯರೇ,

ವಿಷಯ: ವಾರ್ಡ್ ನಂ. 11 (ಕುವೆಂಪುನಗರ) ವ್ಯಾಪ್ತಿಯಲ್ಲಿ 2017–18ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–1802 ಅಡಿಯಲ್ಲಿ ರೂ. 50.00 ಲಕ್ಷಗಳಿಗೆ ಅನುದಾನ ಕಲ್ಪಿಸುವ ಬಗ್ಗೆ.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ. 11 ಕುವೆಂಪುನಗರ ವ್ಯಾಪ್ತಿಯ ಬರುವ ಎಂ.ಎಸ್ ಪಾಳ್ಯ, ಕುವೆಂಪುನಗರ, ಸಿಂಗಾಪುರ, ವರದರಾಜನಗರ, ವಿನಾಯಕನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವವಿದ್ದು, ಹೆಚ್ಚುವರಿಯಾಗಿ ಕೊಳವೆ ಬಾವಿಗಳನ್ನು ಕೊರೆದು ನೀರು ಸರಬರಾಜು ಮಾಡಲು ಹಾಗೂ ತುಂಬ ನೀರಿನ ಘಟಕ ಸ್ಥಾಪಿಸಲು 2017–18ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–1802 ಅನುದಾನದಡಿಯಲ್ಲಿ ರೂ. 50.00 ಲಕ್ಷಗಳ ವಿಶೇಷ ಅನುದಾನ ಕಲ್ಪಿಸಬೇಕಾಗಿ ಕೋರಲಾಗಿದೆ.

Sl No	P-Code	Name of Work	Est Cost in Laksh
1.	P-1802	Drilling of Borewells, Providing Pump Motor and Acessories and Pipelines in Ward No. 11 (Kuvempunagara)	25.00
2.	P-1802	Construction and Installation of RO Plant in Ward No. 11 (Kuvempunagara)	25.00
		Total	50.00

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ವಿ.ವಿ ಪಾರ್ಥಿಬರಾಜನ್
ಪಾಲಿಕೆ ಸದಸ್ಯರು, ವಾರ್ಡ್ ನಂ. 11

92, Varadarajanagar, Vidyaranyapura Post, Bangalore - 560097 | E-mail : vvparthibarajan@gmail.com